



## ಬಾಲಸುಬ್ರಹ್ಮಣ್ಯ ಕಂಜರ್ಪಣೆ

ಕಲೆ: ರೂಪಶ್ರೀ ಕಲ್ಲಿಗನೂರು


# ಆಕಾಶದೆದುರಿನ ಕಂಬ



ನಿರ್ಭರ ನೀಲ ಆಕಾಶದೆದುರು
ನಿಶ್ಚಲ ನೆಲಕ್ಕೂರಿ ನಿಂತ ದುರ್ಬಲನಂತಿದೆ
ಲಂಬಕೋನದ ಕಂಬ.

ಮರವೂ ಆಕಾಶದತ್ತಲೇ ನಿಂತಿದೆ–
ಯಾದರೂ ಬೆಳೆಯುತ್ತದೆ,
ಬೇರುಗಳನ್ನು ನೆಲಕ್ಕಿಳಿಸುತ್ತದೆ,
ಜೀವಭಾರ ಸಾಕೆನಿಸುವಷ್ಟಕ್ಕೆ ನಿಂತು
ಕಾಲಕಾಲಕ್ಕೆ ಹಳತಿಗೆ ಹೊಸತನ್ನು ಬೆಸೆಯುತ್ತದೆ:
ಚಿಗುರನ್ನು ಬದುಕಲು ಬಿಟ್ಟು
ಹೂಹಣ್ಣುಎಲೆಗಳನ್ನರಳಿಸುವ ಉರುಳಿಸುವ
ಮಂತ್ರ ಜಪಿಸುತ್ತದೆ–ಗಾಳಿಗೆ ಮಾತ್ರ ಕೇಳುವಂತೆ.

ನೆಲಕ್ಕೆ ಸಮಾನಾಂತರ ಬದುಕ ಹೆಣೆಯುವ ಜೀವಜಾಲ
ಹೀಗೆ ಬೆಳೆಯುವುದೆ?
ಸುಸ್ತಾದಾಗ ನೆಲಕ್ಕೊರಗುವ, ನೆಲವನಪ್ಪುವ,
ನೆಲದೊಳಗಿಳಿಯುವ,
ದೇಹ ಉಸಿರಿನೆಚ್ಚರ ಕಳೆಯುವುದೆ?

ಕಂಬಕ್ಕೆ ಬೇರುಗಳಿಲ್ಲ,
ಕಳೆದ ದಿನಗಳ ನೆನಪಿನ ಹಸಿರಿಲ್ಲ,
ನಿಂತಿದೆಯೆಂದಷ್ಟೇ ಹೊರತು ನೋಡುವ
ಕಣ್ಣಿಗೂ ಮನಸ್ಸಿಗೂ ಆಕಾಶಕ್ಕೂ ನೆಲಕ್ಕೂ
ಸಮಾನಾಂತರ–ಇದ್ದೂ ಇಲ್ಲದಂತೆ.
ಆಕಾಶವೆಂದರೆ ಸದಾ ನೆಲಕ್ಕೆ ಮುಚ್ಚಿದ ಮುಸುಕು,
ನೆಲದೊಳಗೂರಿದ ಕಂಬ ಶಾಶ್ವತದ ನೇರ ನಿಲುವಲ್ಲೂ
ಹತಾಶ ರೊಚ್ಚಿಗೆದ್ದಿದೆ–ಗೆದ್ದವರೊಡನೆ ಗುದ್ದಾಡುತ್ತಿರುವಂತೆ
ಕೊನೆ ಸಮೀಪಿಸಿದವರಂತೆ–
ಒಳಗೆ ಅಡ್ಡಾಡುವ ಗೆದ್ದಲುಗಳ ಸಂಚಾರಕ್ಕೆ ಬೆವರಿದೆ.